# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ : 08221-224020
E-mail:aeedevanur@gmail.com

ಸಹಾಯಕ ಕಾರ್ಯಪಾಲಕ ಇಂಜನಿಯರ್ (ವಿ)
ಕಾ ಮತು ಪಾ. ಉಪ-ವಿಭಾಗ-2,

ಸಂಖ್ಯೆ:ಸಕಾನಿಇಂ(ವಿ)/ಸ.ಇಂ(ತಾಂ)/ಸಂ.ಗೂಡು/2015-16: 395 ದಿನಾಂಕ: 05-6-17.

## ಸಭಾ ನಡಾವಳಿ:

ಮೇಲಿನ ಉಲ್ಲೇಖದ ಆದೇಶದನ್ವಯ ದಿನಾಂಕ: 25.05.2017 ರಂದು ಕಾರ್ಯನಿರ್ವಾಹಕ ಇಂಜನಿಯರ್(ವಿ), ಚಾವಿಸನಿನಿ., ನಂಜನಗೂಡು ವಿಭಾಗ, ರವರ ಅಧ್ಯಕ್ಷತೆಯಲ್ಲಿ, ಕಾರ್ಯ ಮತ್ತು ಪಾಲನಾ ಉಪವಿಭಾಗ 2 ರ ಆವರಣದಲ್ಲಿ ನಡೆದ ಗ್ರಾಹಕರ ಕುಂದು ಕೊರತೆ ಸಭೆಯ ನಡಾವಳಿಗಳು.

ಹಾಜರಿದ್ದ ಅಧಿಕಾರಿ/ನೌಕರರು/ಸದಸ್ಯರು

1. ಶ್ರೀಯುತ ಸುನಿಲ್ ಕುಮಾರ್.ಎ.ಎ , ಕಾರ್ಯನಿರ್ವಾಹಕ ಇಂಜನಿಯರ್(ವಿ), ನಂಜನಗೂಡು ವಿಭಾಗ.
2. ಶ್ರೀಯುತ ಶ್ರೀಧರ್ ಸಹಾಯಕ ಕಾರ್ಯನಿರ್ವಾಹ ಇಂಜನಿಯರ್(ವಿ), ನಂಜನಗೂಡು ಉಪವಿಭಾಗ-2.
3. ಶ್ರೀಮತಿ ಶೈಲಜ.ಬಿ, ಸಹಾಯಕ ಇಂಜನಿಯರ್(ತಾ), ನಂಜನಗೂಡು ಉಪವಿಭಾಗ-2.
4. ಶ್ರೀಯುತ ಸಂತೋಷ್ ಕುಮಾರ್ ಕಿರಿಯ ಇಂಜನಿಯರ್(ವಿ), ಹುಲ್ಲಹಳ್ಳಿ ಶಾಖೆ.
5. ಶ್ರೀಯುತ ಕಿಶೋರ್.ಈ, ಕಿರಿಯ ಇಂಜನಿಯರ್(ವಿ), ಚಂದ್ರವಾಡಿ ಶಾಖೆ.
6. ಶ್ರೀಯುತ ನಾಗರಾಜು, ಕಿರಿಯ ಇಂಜನಿಯರ್(ವಿ), ಹುರ ಶಾಖೆ.
7. ಶ್ರೀಯುತ ಮಂಜು.ಬಿ, ಕಿರಿಯ ಇಂಜನಿಯರ್(ವಿ), ಬದನವಾಳು ಶಾಖೆ. .
7. ಶ್ರೀಯುತ ಮಹದೇವಯ್ಯ ಕಿರಿಯ ಇಂಜನಿಯರ್(ವಿ), ತಗಡೂರು ಶಾಖೆ.
8 ಶ್ರೀಯುತ ದಾಸಯ್ಯ ಕಪ್ಪಸೋಗೆ ಗ್ರಾಮ.
9. ಶ್ರೀಮತಿ ಲಕ್ಷ್ಮಿ ಕಪ್ಪಸೋಗೆ ಗ್ರಾಮ.
10. ಶ್ರೀಮತಿ ಮೀನಾಕ್ಷಮ್ಮ ನೇರಳೆ ಗ್ರಾಮ.
11. ಶ್ರೀಯುತ ಕೆ.ಬಿ.ಸೂರ್ಯಕುಮಾರ ಕಣ್ಣೇನೂರು ಗ್ರಾಮ.
12. ಶ್ರೀಯುತ ಮಹದೇವಸ್ವಾಮಿ , ಕಬ್ಬು ಬೆಳೆಗಾರರ ಸಂಘ, ಅಂಬಳೆ.

ಮೊದಲಿಗೆ ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್, ನಂಜನಗೂಡು-2 ಉಪವಿಭಾಗರವರು ಮಾತನಾಡಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶದ ಅನ್ವಯ ಉಪವಿಭಾಗದ ಮಟ್ಟದಲ್ಲಿ ಜನಸಂಪರ್ಕ ಸಭೆಯನ್ನು ಅಧೀಕ್ಷಕ ಇಂಜನಿಯರ್(ವಿ) ಕಾ ಮತ್ತು ಪಾ ವೃತ್ತಕಛೇರಿ , ಮೈಸೂರು ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿರುವ್ಯದಾಗಿ ತಿಳಿಸಿ, ಸಭೆಗೆ ಆಗಮಿಸಿರುವ ಅಧಿಕಾರಿಗಳು, ಸಲಹಾಸಮಿತಿ ಸದಸ್ಯರುಗಳು, ಮಾಧ್ಯಮದವರು ಹಾಗೂ ಎಲ್ಲಾ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ, ಅಧೀಕ್ಷಕ ಇಂಜನಿಯರ್ ರವರ ಅನುಪಸ್ಥಿತಿಯಲ್ಲಿ, ಕಾರ್ಯನಿರ್ವಾಹಕ ಇಂಜನಿಯರ್, ನಂಜನಗೂಡು ವಿಭಾಗರವರನ್ನು ಸಭೆನಡೆಸಿಕೊಡಬೇಕೆಂದು ಕೋರಿದರು.

ಮಾನ್ಯ ಅಧ್ಯಕ್ಷರು ಎಲ್ಲರನ್ನೂ ಸಭೆಗೆ ಆತ್ಮೀಯವಾಗಿ ಸ್ವಾಗತಿಸಿ ವಿದ್ಯುತ್ ಸಂಬಂಧಿತ ದೂರುಗಳನ್ನು ದಾಖಲಿಸಿ ಪರಿಹಾರ ಪಡೆಯುವಂತೆ ನೆರೆದಿದ್ದ ವಿದ್ಯತ್ ಗ್ರಾಹಕರುಗಳಲ್ಲಿ ಕೋರಿದರು.

1. ಸಿದ್ದಲಿಂಗಪ್ಪ, ದಾಸನೂರು ಗ್ರಾಮ ಪಂಚಾಯ್ತಿ ಸದಸ್ಯರು ತೊರವಳ್ಳಿ ಗ್ರಾಮ, ಮೊ.ಸಂ: 9886023751 ರವರು ಮಾತನಾಡಿ .

* ಗ್ರಾಮದ ಹೊರಲವಯದ ಜಮೀನಿನಲ್ಲಿ ವಿದ್ಯುತ್ ಕಂಬಗಳು ಮಳೆ ಗಾಳಿಯಿಂದ ವಾಲಿರುತ್ತವೆ ಹಾಗೂ ವಿದ್ಯುತ್ ತಂತಿಗಳು ಜೋತುಬಿದ್ದಿದ್ದು ಜನ – ಜಾನುವಾರುಗಳಿಗೆ ತೊಂದರೆ ಆಗುವ ಸಂಭವವಿರುವುದರಿಂದ ಅವುಗಳನ್ನು ಆದಷ್ಟು ಬೇಗನೆ ಸರಿಪಡಿಸಿ ಕೊಡಬೇಕಾಗಿ ಕೋರಿದರು.

* ಗ್ರಾಮದ ಬಸ್ ಸ್ಟಾಂಡ್ ಬಳಿ ಇರುವ ಟಿಸಿ ಯಲ್ಲಿ ಗಾಳಿ ಮಳೆ ಬಂದಾಗ ಬೆಂಕಿ ಬರುತ್ತಿದ್ದು, ಇದನ್ನು ಸರಿಪಡಿಸಿಕೊಡಬೇಕಾಗಿ ಕೋರಿದರು.

* ನಮ್ಮ ಗ್ರಾಮವು ಕೊನೆ ಗ್ರಾಮವಾಗಿದ್ದು, ಗ್ರಾಮದಲ್ಲಿನ ವಿದ್ಯುತ್ ಸಮಸ್ಯೆಯನ್ನು ಸರಿಪಡಿಸಲು ಗ್ರಾಮ ಮಟ್ಟದ ಸಿಬ್ಬಂದಿಯನ್ನು ನಿಯೋಜಿಸಿ ಕೊಡಬೇಕೆಂದು ಕೋರಿದರು.

* ಗ್ರಾಮದ ವಿದ್ಯುತ್ ಸರಬಾಜಿನ ಲೈನ್‌ನಲ್ಲಿ ಆಗಾಗ್ಗೆ ಸ್ವಲ್ಪ ಗಾಳಿ ಮಳೆಗೆ ವಿದ್ಯುತ್ ಸರಬರಾಜು ಕಡಿತವಾಗುತ್ತದೆ. ಎಲ್ಲಾ ಲೈನ್‌ಗಳನ್ನು ತುರ್ತಾಗಿ ಸರಿ ಪಡಿಸಕೊಡಬೇಕೆಂದು ಕೋರಿದರು.

* ನಮ್ಮ ಗ್ರಾಮಕ್ಕೆ ನಿರಂತರ ಜ್ಯೋತಿ ಯೋಜನೆ ಕಾರ್ಯನಡೆಯುತ್ತದೆ. ಆದಷ್ಟು ಬೇಗ ಈ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಬೇಕೆಂದು ಕೋರಿದರು.

ತೊರವಳ್ಳಿ ಗ್ರಾಮದಲ್ಲಿ ವಾಲಿರುವ ಕಂಬಗಳನ್ನು ಸರಿಪಡಿಸಿ, ವಿದ್ಯುತ್ ಮಾರ್ಗದಲ್ಲಿ ಅಡಚಣೆ ಕಡಿಮೆ ಮಾಡಲು ಹಾಗೂ ವಿದ್ಯುತ್ ಪರಿವರ್ತಕದ ನಿರ್ವಹಣೆ ಕೆಲಸವನ್ನು ಮಾಡಲು ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು. ಗ್ರಾಮಕ್ಕೆ ಸಿಬ್ಬಂದಿಯ ಅವಶ್ಯಕತೆ ಇರುವ ಬಗ್ಗೆ ಪರಿಶೀಲಿಸಿ ವರದಿ ನೀಡಬೇಕೆಂದು ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

(ಕ್ರಮ: ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್/ಶಾಖಾಧಿಕಾರಿ, ತಗಡೂರು)

2 ಶ್ರೀ ಭಾಸ್ಕರ್ ದಾಸನೂರು ಗ್ರಾಮ ಪಂಚಾಯ್ತಿ ತೊರವಳ್ಳಿ ಗ್ರಾಮ, ಮೊ.ಸಂ: 725991861. ರವರು ಮಾತನಾಡಿ .

*. ತೊರವಳ್ಳಿ ಗ್ರಾಮದಲ್ಲಿ ಪರಿರ್ವತಕದ ಡಿ.ಓ.ಎಲ್.ಓ ಫ್ಯೂಸ್‌ಗಳ ನಿರ್ವಹಣೆಯನ್ನು ಗ್ರಾಮದ ನಿವಾಸಿಗಳೇ ಮಾಡುತ್ತಿದ್ದು, ಇದನ್ನು ಇಲಾಖೆಯ ಸಿಬ್ಬಂದಿಯವರೇ ನಿರ್ವಹಿಸುವಂತೆ ಕ್ರಮಕೈಗೊಳ್ಳಲು ಕೋರಿದರು.

(ಕ್ರಮ: ಶಾಖಾಧಿಕಾರಿ, ತಗಡೂರು)

3. ಶ್ರೀಯುತ ಬಸಪ್ಪ ದುಗ್ಗಳ್ಳಿ ಗ್ರಾಮ, ಮೊ.ಸಂ: 8971500885 ರವರು ಮಾತನಾಡಿ,

* ಮಾದಾಪುರ ಎನ್.ಜೆ.ವೈ ಫೀಡರ್ ಚಾರ್ಜ್ ಆದ ನಂತರ ತಮ್ಮ ಕೋಳಿ ಫಾರಂಗೆ ನಿರಂತರ ವಿದ್ಯುತ್ ಇರುವುದಿಲ್ಲ ಎಂದು ತಿಳಿಸಿ, ತಮ್ಮ ತೋಟದ ಮನೆಗೆ ನಿರಂತರ ವಿದ್ಯುತ್ ನೀಡಬೇಕಾಗಿ ಕೋರಿದರು.

ತೋಟದ ಮನೆಗೆ ನಿರಂತರ ವಿದ್ಯುತ್ ಸಂಪರ್ಕವನ್ನು ಸ್ವಯಂ ನಿರ್ವಹಣೆ ಕಾಮಗಾರಿ ಅಡಿಯಲ್ಲಿ ಪಡೆಯುವಂತೆ ಸೂಚಿಸಲಾಯಿತು.

4. ಶ್ರೀಯುತ ಶಿವಾನಂದ್, ನೇರಳೆ ಗ್ರಾಮ, ಮೊ.ಸಂ 9844897735 ರವರು ಮಾತನಾಡಿ,

* ಹಳೇಪುರ , ಹಂಪಾಪುರ ಮತ್ತು ನೇರಳೆ ಗ್ರಾಮಗಳಲ್ಲಿ 400 ವಿದ್ಯುತ್ ಕಂಬಗಳಿದ್ದು, ಅವುಗಳಲ್ಲಿ 24 ಗಂಟೆ ವಿದ್ಯುತ್ ಉರಿಯುತ್ತಿರುತ್ತದೆ. ಇದ್ದರಿಂದ ನಮ್ಮ ಪಂಚಾಯ್ತಿಗೆ ವಿದ್ಯುತ್ ಬಿಲ್ ಹೆಚ್ಚು ಬರುತ್ತಿದ್ದು, ಪಂಚಾಯ್ತಿ ಹಣವು ವ್ಯರ್ಥವಾಗುತ್ತಿರುತ್ತದೆ. ಆದ್ದರಿಂದ ಈ ಬೀದಿ ದೀಪಗಳಿಗೆ ಕಂಟ್ರೋಲ್ ಅಳವಡಿಸಿ ವಿದ್ಯುತ್ ಮತ್ತು ಹಣ ಉಳಿತಾಯ ಮಾಡಲು ಕ್ರಮ ಕೈಗೊಳ್ಳಬೇಕೆಂದು ಕೋರಿದರು.

ಬೀದಿ ದೀಪಗಳ ನಿರ್ವಹಣೆ ಕಾರ್ಯವು ಪಂಚಾಯತಿ ವ್ಯಾಪ್ತಿಗೆ ಒಳಪಡುವುದರಿಂದ, ಪಂಚಾಯತಿಯವರೇ ಬೀದಿ ದೀಪದ ಕಂಟ್ರೋಲ್ ಅಳವಡಿಸಲು ಕ್ರಮಕೈಗೊಳ್ಳುವುದು ಹಾಗೂ 3 ವೈರ್ ಎಲ್.ಟಿ. ಮಾರ್ಗವನ್ನು 5 ವೈರ್ ಎಲ್.ಟಿ. ಮಾರ್ಗವಾಗಿ ಬದಲಿಸಿ ಕಂಟ್ರೋಲ್ ಅಳವಡಿಸಲು ಪಂಚಾಯತಿ ವತಿಯಿಂದಲೇ ಕ್ರಮಕೈಗೊಳ್ಳಬೇಕು ಎಂದು ತಿಳಿಸಿದರು.

5. ಶ್ರೀಯುತ ಮಹದೇವಸ್ವಾಮಿ, ತೂರವಳ್ಳಿಮೋಳ, ಮೊ.ಸಂ 9902316660 ಗ್ರಾಮ. ರವರು ಮಾತನಾಡಿ,

* ತೊರವಳ್ಳಿಯಲ್ಲಿ 12 ಕಂಬಗಳು ಶಿಥಿಲಗೊಂಡಿದ್ದು ಇವುಗಳನ್ನು ಶೀಘ್ರವಾಗಿ ಬದಲಾಯಿಸಿಕೊಡಬೇಕೆಂದು ಕೋರಿದರು.

* ಬೀದಿ ದೀಪಗಳಿಗೆ ಕಂಟ್ರೋಲ್ ಅಳವಡಿಸಿ ವಿದ್ಯುತ್ ಮತ್ತು ಹಣ ಉಳಿತಾಯ ಮಾಡಲು ಕ್ರಮ ಕೈಗೊಳ್ಳಬೇಕೆಂದು ಕೋರಿದರು.

ಬೀದಿ ದೀಪಗಳಿಗೆ ಕಂಟ್ರೋಲ್ ಅಳವಡಿಸುವ ಸಂಬಂಧ ಶ್ರೀ ಶಿವಾನಂದ್ ನೇರಳೆ ರವರಿಗೆ ಸೂಚಿಸಿದ್ದ ಪರಿಹಾರವನ್ನೇ ಪುನಃ ಸೂಚಿಸಲಾಯಿತು.

(ಕ್ರಮ: ಶಾಖಾಧಿಕಾರಿ, ತಗಡೂರು)

6. ಶ್ರೀಯುತ ಚಂದ್ರಶೇಖರ್ ಕಂದೇಗಾಲ ಗ್ರಾಮ., ಮೊ.ಸಂ 9980029821 ರವರು ಮಾತನಾಡಿ,

* ಐ.ಪಿ.ಸೆಟ್ ಸಕ್ರಮಗೊಳಿಸಲು 2009 ರಲ್ಲಿ ಹಣ ಪಾವತಿ ಮಾಡಿದ್ದು, ಇಲ್ಲಿಯವರೆಗೂ ಆರ್.ಆರ್.ನಂಬರ್ ನೀಡದೇ ಐ.ಪಿ.ಸೆಟ್ ಗೆ ವಿದ್ಯುತ್ ಕಡಿತಗೊಳಿಸಿರುತ್ತಾರೆ. ಆದ್ದರಿಂದ ಆರ್.ಆರ್. ನಂಬರ್ ನ್ನು ಹುಡುಕಿಸಿಕೊಡಿ ಎಂದು ಕೋರಿದರು.

(ಕ್ರಮ: ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್/ಸಹಾಯಕ ಇಂಜಿನಿಯರ್(ತಾಂತ್ರಿಕ)

7. ಶ್ರೀಯುತ ಇ.ಎಂ.ಮಹೇಶ್ ವಳಗೆರೆ, ಗ್ರಾಮ ಮೊ.ಸಂ 9636828514. ರವರು ಮಾತನಾಡಿ,

* ನಮ್ಮ ಗ್ರಾಮಕ್ಕೆ ಇದುವರೆಗೂ ನಿರಂತರ ವಿದ್ಯುತ್ ನೀಡಿರುವುದಿಲ್ಲ ಹಾಗೂ ನಮ್ಮ ಜಮೀನಿನಲ್ಲಿರುವ ಮನೆಗೆ ನಿರಂತರ ವಿದ್ಯುತ್ ನೀಡಲು ಕೋರಿದರು.

ಶಿರಮಳ್ಳಿ ಎನ್.ಜೆ.ವೈ ಫೀಡರ್ ಕಾಮಗಾರಿಯು ಜೂನ್ 2017 ನೇ ಅಂತ್ಯಕ್ಕೆ ಮುಗಿಯಲಿದ್ದು ನಂತರ ವಳಗೆರೆ ಗ್ರಾಮಕ್ಕೆ ನಿರಂತರ ವಿದ್ಯುತ್ ದೊರೆಯಲಿದೆ ಹಾಗೂ ತೋಟದ ಮನೆಗೆ ವಿದ್ಯುತ್ ಪಡೆಯಲು ಶ್ರೀ ಬಸಪ್ಪ ದುಗ್ಗಳ್ಳಿ ಗ್ರಾಮದವರಿಗೆ ನೀಡಿದ ವಿವರವನ್ನು ಪುನಃ ಸೂಚಿಸಲಾಯಿತು.

8. ಶ್ರೀಯುತ ಕೃಷ್ಣಮೂರ್ತಿ, ಕಂದೆಗಾಲ ಗ್ರಾಮ. ಮೊ.ಸಂ–8494863024 ರವರು ಮಾತನಾಡಿ,

* ಕಂದೆಗಾಲ ಗ್ರಾಮದಲ್ಲಿ ಕಾಂಕ್ರೀಟ್ ರಸ್ತೆ ಮಾಡುವ ಕೆಲಸವು ಪೂರ್ಣಗೊಂಡಿದ್ದು , ವಿದ್ಯುತ್ ಕಂಬಗಳು ರಸ್ತೆ ಮದ್ಯದಲ್ಲಿವೆ, ಅವುಗಳನ್ನು ತೆಗೆಸಲು ಕ್ರಮಕೈಗೊಳ್ಳಬೇಕಾಗಿ ಕೋರಿದರು.

* ತಮ್ಮ ಗ್ರಾಮದಲ್ಲಿ 300 ಬಡ ಕುಟುಂಬಗಳಿದ್ದು, ಅವುಗಳಲ್ಲಿ 150 ಮನೆಗಳು ಮಾತ್ರ ಭಾಗ್ಯ ಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ಪಡೆದಿವೆ, ಉನ್ನುಳಿದ ಮನೆಗಳಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಬಾಕಾಗಿ ಕೋರಿದರು.

* ತಮ್ಮ ಗ್ರಾಮದಲ್ಲಿ ಒಬ್ಬರು ಅಂಗವಿಕಲರಾಗಿರುವ ಕುಟುಂಬವಿದ್ದು ಅವರ ಉಚಿತವಾಗಿ ಮನೆಗೆ ವಿದ್ಯುತ್ ಅಳವಡಿಸಿಕೊಡಬೇಕಾಗಿ ಕೋರಿದರು.

* ತಮ್ಮ ಗ್ರಾಮದ ಹೊರಗಡೆ ಗಂಗಾ ಕಲ್ಯಾಣ ಯೋಜನೆಯಲ್ಲಿ ಅಳವಡಿಸಿದ್ದ ಹಳೆಯ ಕಂಬಗಳು ಕಳ್ಳತನವಾಗಿದ್ದು ಕೇವಲ ಟಿ.ಸಿ ಮಾತ್ರ ಉಳಿದಿದೆ. ಈ ಲೈನ್ ಅನ್ನು ಸರಿಪಡಿಸಿಕೊಡಬೇಕಾಗಿ ಕೋರಿದರು, ಹಾಗೂ ಈ ಹಳೆಯ ಕಂಬಗಳು ಬೇರೆ ಕಡೆ ಅನಧಿಕೃತವಾಗಿ ಉಪಯೋಗವಾಗುವುದನ್ನು ತಡೆಗಟ್ಟಬೇಕೆಂದು ಕೋರಿದರು.

* ಕಗ್ಗಲೂರಿನಿಂದ ಹಳೇ ಕಂಬಗಳನ್ನು ತಂದು ಹೊಸ ಕಾಮಗಾರಿಯಲ್ಲಿ ಅಳವಡಿಸಿರುತ್ತಾರೆ, ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿದರು.

(ಕ್ರಮ: ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್/ಶಾಖಾಧಿಕಾರಿ, ಹುರಾ)

9. ಶ್ರೀಯುತ ರಂಗದಾಸ್ , ಸಲಹಾ ಸಮಿತಿ ಸದಸ್ಯರು, ವೀರೇದೇವನಪುರ ಗ್ರಾಮ. ಮೊ.ಸಂ 8971278090 – ರವರು ಮಾತನಾಡಿ,

* ಮಹದೇವನಗರ ಗ್ರಾಮ ವಿದ್ಯುತ್ ಸಂಪರ್ಕದ ನಿರ್ವಹಣೆಯು ಸುತ್ತೂರು ಶಾಖೆಯವರು ಮಾಡುತ್ತಿದ್ದು, ಬಿಲ್ ನೀಡುವುದು ಮತ್ತು ವಸೂಲಾತಿ ಮಾಡುವುದನ್ನು ಬದನವಾಳು ಶಾಖೆಯವರು ಮಾಡುತ್ತಿದ್ದಾರೆ. ಆದ್ದರಿಂದ ಮಹದೇವನಗರ ಗ್ರಾಮವನ್ನು ಸಂಪೂರ್ಣವಾಗಿ ಬದನವಾಳು ಶಾಖೆಗೆ ಸ್ಥಳಾಂತರಿಸಿಕೊಡಬೇಕೆಂದು ಕೋರಿದರು.

ಮಹದೇವನಗರ ಗ್ರಾಮವನ್ನು ಯಾವುದಾದರೂ ಒಂದು ಶಾಖೆಗೆ ಸಂಪೂರ್ಣವಾಗಿ ವರ್ಗಾಯಿಸುವ ಸಾಧ್ಯತೆಗಳ ಬಗ್ಗೆ ಉಪವಿಭಾಗಾಧಿಕಾರಿಗಳಿಗೆ ವರದಿ ನೀಡಲು ಸೂಚಿಸಲಾಯಿತು.

(ಕ್ರಮ: ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್)



